KAKD400004362021



**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೋಮವಾರಪೇಟೆ.**

ಉಪಸ್ಥಿತರು : **ಶ್ರೀ ಶ್ರೀನಾಥ.ಜೆ.ಎನ್,** ಬಿ,ಎ,ಎಲ್. ಎಲ್.ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂಎಫ್‌ಸಿ,
ಸೋಮವಾರಪೇಟೆ.

ದಿನಾಂಕಃ 8 ನೇ ಜುಲೈ 2026.

**ಸಿ.ಸಿ. ನಂ: 315/2021**

**ಪಿರ್ಯಾದುದಾರರು :** ಕರ್ನಾಟಕ ಸರ್ಕಾರದ ಪರವಾಗಿ
ಸುಂಟಿಕೊಪ್ಪ ಪೊಲೀಸ್ ಠಾಣೆ.

(ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

**ಆರೋಪಿಗಳು :**

1. ಸುರೇಶ್.ಹೆಚ್.ವಿ,
ತಂದೆಃ ವಿಶ್ವನಾಥ, 21 ವರ್ಷ,
36 ವರ್ಷ, ಲಕ್ಕೇರಿ ಪೈಸಾರಿ
ಕುಂಬೂರು ಗ್ರಾಮ ಮತ್ತು ಅಂಚೆ,
ಸುಂಟಿಕೊಪ್ಪ ಹೋಬಳಿ,
ಸೋಮವಾರಪೇಟೆ ತಾಲ್ಲೂಕು,

2. ಯಶ್ವಂತ್, 25 ವರ್ಷ,
ಅಂಗನವಾಡಿ ಕೇಂದ್ರದ ಎದುರು,
ದೊಡ್ಡಕಲಾಸಂದ್ರ,
ಬೆಂಗಳೂರು-ಉತ್ತರ.

**(2 ನೇ ಆರೋಪಿಯನ್ನು ಈ ಪ್ರಕರಣದಿಂದ ಬೇರ್ಪಡಿಸಿ ಸಿಸಿ ನಂ.613/2023 ರಲ್ಲಿ ಅಳವಡಿಸಲಾಗಿದೆ)**

(ಶ್ರೀ.ಬಿ.ಇ.ಜಯೇಂದ್ರ. ವಕೀಲರು).

**::ತೀರ್ಪು::**

ಸುಂಟಿಕೊಪ್ಪ ಠಾಣಾ ಉಪ ನಿರೀಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಮತ್ತು ಮೋಟಾರು ವಾಹನ ಕಾಯಿದೆ ಕಲಂ 181, 146 ಸಹವಾಚಕ 196 ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **<u>ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ:</u>**

ದಿನಾಂಕಃ 30.09.2020 ರಂದು ಸಂಜೆ 5.00 ಗಂಟೆಯ ಸಮಯದಲ್ಲಿ ಸುಂಟಿಕೊಪ್ಪ ಠಾಣಾ ಸರಹದ್ದಿಗೆ ಸೇರಿದ ಗರಗಂದೂರು ಗ್ರಾಮದ ಸುಂಟಿಕೊಪ್ಪ-ಮಾದಾಪುರ ರಾಜ್ಯ ಹೆದ್ದಾರಿಯ ಚೆನ್ನಮ್ಮ ಜೂನಿಯರ್ ಕಾಲೇಜು ಮೈದಾನದ ಹತ್ತಿರದ ಟಾರು ರಸ್ತೆಯಲ್ಲಿ ಚಾಸಾ-1 ರವರು ಕೆಎ-12-ಎನ್-7109 ರ ಮಾರುತಿ ಓಮಿನಿ ಕಾರಿನಲ್ಲಿ ಚಾಸಾ-2 ರಿಂದ 4 ರವರನ್ನು ಕೂರಿಸಿಕೊಂಡು ಚಲಾಯಿಸಿಕೊಂಡು ಹೋಗುತ್ತಿದ್ದಾಗ ಎದುರುಗಡೆಯಿಂದ ಬಂದ 1 ನೇ ಆರೋಪಿಯು ಚೆನ್ನಮ್ಮ ಕಾಲೇಜು ಮಾರ್ಗವಾಗಿ ಕೆಎ-51-ಎಲ್-3054 ರ ಅಪಾಚಿ ಮೋಟಾರು ಸೈಕಲ್ ನ ಹಿಂಬದಿಯಲ್ಲಿ ನಿತಿನ್ ಪಿ.ಎಸ್ ಎಂಬುವವರನ್ನು ಕೂರಿಸಿಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಮೋಟಾರು ಸೈಕಲನ್ನು ಚಲಾಯಿಸಿಕೊಂಡು ಬಂದು ಎದುರುಗಡೆ ಬರುತ್ತಿದ್ದ ಕೆಎ-12-ಎನ್-7109 ರ ಮಾರುತಿ ಓಮಿನಿ ಕಾರಿನ ಬಲಚಕ್ರ ಹಾಗೂ ಬಂಪರಿಗೆ ಡಿಕ್ಕಿಪಡಿಸಿದ ಪರಿಣಾಮ ಮೋಟಾರು ಸೈಕಲ್ ಉಜ್ಜಿಕೊಂಡು ಹೋಗಿ ರಸ್ತೆಯಲ್ಲಿ ಬಿದ್ದಿದ್ದು ಹಾಗೂ ಮಾರುತಿ ವ್ಯಾನು ಬಲಭಾಗದ ಚರಂಡಿಗೆ ಇಳಿದಿರುತ್ತದೆ, ಈ ಅಪಘಾತದ ಪರಿಣಾಮ 1 ನೇ ಆರೋಪಿಯು ಮತ್ತು ಹಿಂಬದಿ ಸವಾರ ನಿತಿನ್.ಪಿ.ಎಸ್ ರವರು ಗಾಯಗೊಂಡಿರುತ್ತಾರೆ. ಇವರನ್ನು ಕೂಡಲೇ ಮಾದಾಪುರದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಮಡಿಕೇರಿ ಅಶ್ವಿನಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆ ಬಗ್ಗೆ ಕರೆದುಕೊಂಡು ಹೋದಾಗ, ಸದರಿ ಆಸ್ಪತ್ರೆಯಲ್ಲಿ ನಿತಿನ್.ಪಿ.ಎಸ್ ರವರಿಗೆ ಸೊಂಟ ಹಾಗೂ ತೊಡೆಯ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳುಂಟಾದ ಪರಿಣಾಮ ಚಿಕಿತ್ಸೆ ಫಲಕಾರಿಯಾಗದೇ ಸಂಜೆ 6.30 ರ ಸಮಯದಲ್ಲಿ ಮೃತಪಟ್ಟಿರುತ್ತಾರೆ ಹಾಗೂ 1 ನೇ ಆರೋಪಿಯು ಮೋಟಾರು ಸೈಕಲನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತವಾಗಿರುವುದು ಮತ್ತು ಚಾಲನಾ ಪತ್ರವಿಲ್ಲದೇ ಮೋಟಾರು ಸೈಕಲ್ ಚಾಲನೆ ಮಾಡಿರುತ್ತಾರೆಂದು ತನಿಖೆಯಿಂದ ದೃಡಪಟ್ಟಿರುತ್ತದೆ ಎಂದು ಪ್ರಕರಣವಾಗಿರುತ್ತದೆ.

3. ಆರೋಪಿಗಳ ವಿರುದ್ಧ ದೂರನ್ನು ದಾಖಲಿಸಿ ತನಿಖೆ ನಡೆಸಿ ಆರೋಪಿಗಳ ವಿರುದ್ಧ ದೋಷಾರೋಪಣೆಯನ್ನು ಪೋಲೀಸರು ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತಾರೆ. ಸುಂಟಿಕೊಪ್ಪ ಠಾಣಾ ಉಪನಿರೀಕ್ಷಕರು ನ್ಯಾಯಾಲಯದಲ್ಲಿ ದಾಖಲು ಮಾಡಿದ ದೋಷಾ

ರೋಪಣೆಯ ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿಗಳ ಮೇಲಿನ ಆರೋಪ ಮೇಲ್ನೋಟಕ್ಕೆ ಕಂಡುಬಂದ ಕಾರಣದಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ 190 ರಡಿಯಲ್ಲಿ ಆರೋಪಿಗಳ ವಿರುದ್ದ ನ್ಯಾಯಾಲಯ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗಳಿಗೆ ನ್ಯಾಯಾಲಯದಲ್ಲಿ ಸಮನ್ಸ್ ಜಾರಿ ಮಾಡಿದ್ದು, ಸದರಿ ಸಮನ್ಸ್ ಆರೋಪಿಗಳಿಗೆ ಜಾರಿ ಯಾಗಿರುತ್ತದೆ. 1 ನೇ ಆರೋಪಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯದಲ್ಲಿ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. 1 ನೇ ಆರೋಪಿಗೆ ಅದೇದಿನ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ಪ್ರಕರಣದ ದಾಖಲೆಗಳನ್ನು ಮತ್ತು ಇತರೆ ದಾಖಲೆಗಳನ್ನು ಒದಗಿಸ ಲಾಯಿತು. ನಂತರದಲ್ಲಿ ನ್ಯಾಯಾಲಯ 1 ನೇ ಆರೋಪಿಯ ವಿರುದ್ದ ದೋಷಾರೋಪಣೆ ಯನ್ನು ರೂಪಿಸಿ ಓದಿ ಹೇಳಿದ್ದು, 1 ನೇ ಆರೋಪಿಯು ತಾನು ಯಾವುದೇ ತಪ್ಪನ್ನು ಮಾಡಿಲ್ಲ ವೆಂದು ಪ್ರಕರಣದ ವಿಚಾರಣೆ ಆಗಬೇಕೆಂದು ವಿನಂತಿಸಿರುತ್ತಾರೆ. 2 ನೇ ಆರೋಪಿಯು ನ್ಯಾಯಾಲಯಕ್ಕೆ ಗೈರುಹಾಜರಾದ ಕಾರಣ 2 ನೇ ಆರೋಪಿಯನ್ನು ಈ ಪ್ರಕರಣದಿಂದ ಬೇರ್ಪಡಿಸಿ ಸಿಸಿ.ನಂ.617/2023 ರಲ್ಲಿ ಅಳವಡಿಸಲಾಗಿದೆ.

4. ಅಭಿಯೋಜನಾಪಕ್ಷದವರು ದೋಷಾರೋಪಣೆಯಲ್ಲಿ ತಿಳಿಸಿರುವ ಆರೋಪವನ್ನು 1 ನೇ ಆರೋಪಿ ವಿರುದ್ದ ಸಾಬೀತುಪಡಿಸುವ ಉದ್ದೇಶದಿಂದ ದೋಷಾರೋಪಣೆಯಲ್ಲಿ ತೋರಿಸಿ ರುವ ಸಾಕ್ಷಿದಾರರಾದ ಚಾಸಾ-1, 3 ರಿಂದ 6, 8, 24 ರಿಂದ 26 ರವರನ್ನು ಪ್ರಾಸಾ-1 ರಿಂದ 9 ಎಂದು ಹಾಜರುಪಡಿಸಿ ವಿಚಾರಣೆ ಮಾಡಿರುತ್ತಾರೆ ಮತ್ತು ಪ್ರಾಸಾ-1 ರಿಂದ ನಿಪಿ-31 ದಾಖಲೆ ಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ನಂತರದಲ್ಲಿ 1 ನೇ ಆರೋಪಿಯ ವಿರುದ್ದ ಆರೋಪ ಕಂಡುಬಂದ ಕಾರಣದಿಂದ ಸಾಕ್ಷ್ಯಧಾರಗಳನ್ನು ಅನುಸರಿಸಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ 1 ನೇ ಆರೋಪಿಯ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು. 1 ನೇ ಆರೋಪಿಯು ಸಾಕ್ಷಿದಾರರುಗಳ ಹೇಳಿಕೆಗಳನ್ನು ಅಲ್ಲಗಳೆದಿದ್ದು, ತಮ್ಮಪರ ಯಾವುದೇ ವಿಚಾರಣೆ ಇಲ್ಲವೆಂದು ತಿಳಿಸಿದ ಮೇರೆಗೆ ಪ್ರಕರಣವನ್ನು ಉಭಯಪಕ್ಷಗಾರರ ವಾದಮಂಡನೆಗೆ ನಿಗದಿಪಡಿಸಲಾಯಿತು. ಅಭಿಯೋಜನಾಪಕ್ಷದವರ ದೋಷಾರೋಪಣೆಯ ದಾಖಲೆಗಳನ್ನು ಮತ್ತು ನಾಯಾಲಯದ ಮುಂದೆ ಆಗಿರುವ ಸಾಕ್ಷ್ಯವಿಚಾರಣೆಯನ್ನು ಪರಿಶೀಲಿಸಿದಾಗ ನನ್ನ ಗಮನಕ್ಕೆಈ ಕೆಳಕಂಡ ಅಂಶಗಳು ಮೂಡಿ ಬಂದಿರುತ್ತದೆ.

5. ನ್ಯಾಯಾಲಯದಲ್ಲಿ ಇರುವ ಸಂಪೂರ್ಣವಾದ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರ ಪ್ರಕರಣದ ಇತ್ಯಾರ್ಥಕ್ಕೆ ನನಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

**ಅಂಶಗಳುಃ-**

**ಅಂಶ :1:** ದಿನಾಂಕ 30.09.2020 ರಂದು ಸಂಜೆ 5.00 ಗಂಟೆಗೆ ಸುಂಟಿಕೊಪ್ಪ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗರಗಂದೂರು ಗ್ರಾಮದ ಸುಂಟಿಕೊಪ್ಪ ಮಾದಾಪುರ ರಾಜ್ಯ ಹೆದ್ದಾರಿಯ ಚೆನ್ನಮ್ಮ ಜೂನಿಯರ್ ಕಾಲೇಜು ಮೈದಾನದ ಹತ್ತಿರದ ಟಾರು ರಸ್ತೆಯಲ್ಲಿ ಚಾಸಾ-1 ರವರು ಕೆಎ-12-ಎನ್-7109 ರ ಮಾರುತಿ ಓಮಿನಿ ಕಾರಿನಲ್ಲಿ ಚಾಸಾ-2 ರಿಂದ 4 ರವರನ್ನು ಕೂರಿಸಿಕೊಂಡು ಚಲಾಯಿಸಿಕೊಂಡು ಹೋಗುತ್ತಿದ್ದಾಗ 1 ನೇ ಆರೋಪಿಯು ಎದುರುಗಡೆಯಿಂದ ಚನ್ನಮ್ಮ ಕಾಲೇಜು ಮಾರ್ಗವಾಗಿ ಕೆಎ-51-ಎಲ್-3054 ರ ಅಪಾಚಿ ಮೋಟಾರು ಸೈಕಲ್ ನಲ್ಲಿ ಹಿಂಬದಿಯಲ್ಲಿ ನಿತಿನ್ ಪಿ.ಎಸ್ ಎಂಬುವವರನ್ನು ಕೂರಿಸಿಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಮೋಟಾರು ಸೈಕಲನ್ನು ಚಲಾಯಿಸಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ಕೆಎ-12-ಎನ್-7109 ರ ಮಾರುತಿ ಓಮಿನಿ ಕಾರಿನ ಬಲಚಕ್ರ ಹಾಗೂ ಬಂಪರಿಗೆ ಡಿಕ್ಕಿಪಡಿಸಿದ್ದು, ಆ ಮೂಲಕ 1 ನೇ ಆರೋಪಿಯು ಭಾ.ದಂ.ಸಂ.ಕಲಂ.279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತುಪಡಿಸುವರೇ?

**ಅಂಶ :2:** ಎರಡನೇಯದಾಗಿ, ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು 1 ನೇ ಆರೋಪಿಯು ಸದರಿ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಡಿಕ್ಕಿಪಡಿಸಿದ ಪರಿಣಾಮ ಮೋಟಾರು ಸೈಕಲ್ ಉಜ್ಜಿಕೊಂಡು ಹೋಗಿ ರಸ್ತೆಯಲ್ಲಿ ಬಿದ್ದಿದ್ದು ಹಾಗೂ ಮಾರುತಿ ವ್ಯಾನ್ ಬಲ ಭಾಗದ ಚರಂಡಿಗೆ ಇಳಿದಿರುತ್ತದೆ, ಸದರಿ ಘಟನೆಯಿಂದ 1 ನೇ ಆರೋಪಿ ಮತ್ತು ಹಿಂಬದಿ ಸವಾರ ನಿತಿನ್.ಪಿ.ಎಸ್ ಗೂ ಗಾಯಗೊಂಡಿದ್ದು, ಕೂಡಲೇ ಮಾದಾಪುರ ಆಸ್ಪತ್ರೆಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಮಡಿಕೇರಿ ಅಶ್ವಿನಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆ ಬಗ್ಗೆ ಕರೆದುಕೊಂಡು ಹೋದಾಗ ಆಸ್ಪತ್ರೆಯಲ್ಲಿ ಇವರಿಗೆ ಸೊಂಟ ಹಾಗೂ ತೊಡೆಯ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆಂದು ತಿಳಿಸಿರುತ್ತಾರೆ, ನಂತರ ಚಿಕಿತ್ಸೆ ಫಲಕಾರಿಯಾಗದೇ ಸಂಜೆ 6.30 ಗಂಟೆಗೆ ನಿತಿನ್.ಪಿ.ಎಸ್‌ರವರು ಮರಣ ಹೊಂದಿರುತ್ತಾರೆ, ಆ ಮೂಲಕ 1 ನೇ ಆರೋಪಿಯು ಭಾ.ದಂ.ಸಂ.ಕಲಂ304(ಎ)ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತುಪಡಿಸುವರೇ?

**ಅಂಶ :3:** ಮೂರನೇಯದಾಗಿ, ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು 1 ನೇ ಆರೋಪಿಯು ಸದರಿ ವಾಹನ ಚಲಾಯಿಸಲು ಚಾಲನ ಪರವಾನಗಿ ಇಲ್ಲದಿರುವ ವಿಚಾರ ತಿಳಿದಿದ್ದರೂ ಕೂಡ ವಾಹನವನ್ನು ಚಲಾಯಿಸಿದ್ದು, ಆ ಮೂಲಕ 1 ನೇ ಆರೋಪಿಯು ಭಾ.ದಂ.ಸಂ.

ಕಲಂ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವರೇ?

**ಅಂಶ :4:** ಯಾವ ಆದೇಶ?

6. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿ ಪರ ವಕೀಲರ ವಾದ ಮತ್ತು ಪ್ರತಿವಾದಗಳನ್ನು ಆಲಿಸಿ ನ್ಯಾಯಾಲಯದ ಮುಂದಿರುವ ಸಂಪೂರ್ಣ ಮೌಖಿಕ ಹಾಗೂ ದಸ್ತಾವೇಜು ದಾಖಲೆಗಳನ್ನು ಪರಿಶೀಲಿಸಿದ ನಂತರ ನಾನು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ-1 : **ನಕಾರಾತ್ಮಕವಾಗಿ**
ಅಂಶ-2 : **ನಕಾರಾತ್ಮಕವಾಗಿ**
ಅಂಶ-3 : **ನಕಾರಾತ್ಮಕವಾಗಿ**
ಅಂಶ-4: ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿ..

***: ಕಾರಣಗಳು :***

7. **ಅಂಶ 1 ರಿಂದ 3:-**ಅಂಶ.1 ರಿಂದ 3 ಒಂದನ್ನೊಂದು ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

8. ಈ ಪ್ರಕರಣದಲ್ಲಿ ಚಾಸಾ-24 ಪ್ರಕರಣ ದಾಖಲಿಸಿದವರಾದ ರಮೇಶ್.ಕೆ.ಒ ಇವರನ್ನು ಪ್ರಾಸಾ-7 ಎಂದು, ವಿಚಾರಣೆ ಮಾಡಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸುತ್ತಾ ದಿಃ 30.09.2020 ರಂದು ಠಾಣೆಯ ಉಸ್ತುವಾರಿಯಲ್ಲಿದ್ದಾಗ ಸಂಜೆ.5.45 ಗಂಟೆಗೆ ಚಾಸಾ-1 ರವರು ಹಾಜರಾಗಿ ಪಿರ್ಯಾದು ನೀಡಿರುತ್ತಾರೆ. ಸದರಿ ಪಿರ್ಯಾದನ್ನು ಹೊಂದಿಕೊಂಡು ಮೊಕದ್ದಮೆ ಸಂಖ್ಯೆಃ46/2020 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡಿರುತ್ತಾರೆ. ಪ್ರ.ವ.ವರದಿಯನ್ನು ನ್ಯಾಯಲಯಕ್ಕೆ ರವಾನಿಸಿಕೊಂಡಿರುತ್ತೇನೆ. ಘಟನಾ ಸ್ಥಳಕ್ಕೆ ಬರಮಾಡಿ ಪಿರ್ಯಾದಿಯು ತೋರಿಸಿದ ಘಟನಾ ಸ್ಥಳವನ್ನು ಮಹಜರು ಜರುಗಿಸಿ ಮಹಜರು ಕಾಲದಲ್ಲಿ ಘಟನಾ ಸ್ಥಳದಲ್ಲಿ ಸಿಕ್ಕಿದ ಓಮಿನಿ ಮಾರುತಿ ಕಾರಿನ ಇಂಡಿಕೇಟರಿನ ಚೂರುಗಳು, ಮೋಟಾರು ಸೈಕಲಿನ ಬ್ರೆಕ್ ಲೈಟ್ ಚೂರುಗಳು, ಮೋಟಾರು ಸೈಕಲಿನ ತುಂಡಾಗಿರುವ ಡೂಮ್ ಲೈಟ್, ಮೋಟಾರು ಸೈಕಲಿನ ನಂಬರ್ ಪ್ಲೇಟ್‌ನ ಸಮೇತ ಮಡ್ ಗಾರ್ಡ್ ತುಂಡು, ಕೆಎ-12-ಎನ್-7109 ರ ಮಾರುತಿ ಓಮಿನಿ ವ್ಯಾನ್ ಅನ್ನು ಕೆಎ-51-ಎಲ್-3054 ರ ಅಪಾಚಿ ಮೋಟಾರು

ಸೈಕಲ್ ಅನ್ನು ವಶಪಡಿಸಿಕೊಂಡು 6.30 ರಿಂದ 7.30 ರವರೆಗೆ ಮಹಜರು ಜರುಗಿಸಿ ವಶಪಡಿಸಿಕೊಂಡ ಮಾಲುಗಳೊಂದಿಗೆ ಠಾಣೆಗೆ ಬಂದಿರುತ್ತೇನೆ, ನಂತರ ಮುಂದಿನ ತನಿಖೆಗಾಗಿ ಚಾಸಾ-25 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

9. ಮುಂದುವರೆದು, ದೂರನ್ನು ಈಗಾಗಲೇ ನಿಪಿ-1 ಎಂದು ಸಾಕ್ಷಿಯ ಸಹಿಯ ಸಹಿಯನ್ನು ನಿಪಿ-1(ಬಿ)ಎಂದು, ಮಹಜರನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು, ಪ್ರ.ವ. ವರದಿಯನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ)ಎಂದು, ಫೋಟೋಗಳನ್ನು  ನಿಪಿ-9 ರಿಂದ 19 ಎಂದು, ಸಿಡಿಯನ್ನು ನಿಪಿ-20 ಎಂದು, 65(ಬಿ) ದೃಡೀಕರಣ ಪತ್ರವನ್ನು ನಿಪಿ-21 ಎಂದು ಗುರುತಿಸಿರುವುದಾಗಿಯೂ, ಓಮಿನಿ ಮಾರುತಿ ಕಾರಿನ ಇಂಡಿಕೇರಿನ ಚೂರುಗಳು, ಮೋಟಾರು ಸೈಕಲಿನ ಬ್ರೆಕ್ ಲೈಟ್ ಚೂರುಗಳು, ಮೋಟಾರು ಸೈಕಲಿನ ತುಂಡಾಗಿರುವ ಡೂಮ್ ಲೈಟ್, ಮೋಟಾರು ಸೈಕಲಿನ ನಂಬರ್ ಪ್ಲೇಟ್‌ನ ಸಮೇತ ಮಡ್ ಗಾರ್ಡ್ ತುಂಡುಗಳನ್ನು ಮು.ಮಾ.1 ರಿಂದ 4 ಎಂದು ಗುರುತಿಸಿರುವುದಾಗಿಯೂ ನುಡಿದಿರುತ್ತಾರೆ, ಇವರನ್ನು ಪಾಟೀಸವಾಲಿಗೆ ಒಳಪಡಿಸಿದಾಗ ದೂರು ನೀಡಲು ಶಿವಕುಮಾರ್ ರವರು ಒಬ್ಬರೇ ಠಾಣೆಗೆ ಬಂದಿದ್ದರು, ಈ ಕೇಸಿನಲ್ಲಿ ಒಬ್ಬರು ಮೃತಪಟ್ಟಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ, ಈ ಕೇಸಿಗೆ ಸಂಬಂಧಪಟ್ಟಂತೆ ಓಮಿನಿ ಕಾರಿನ ದಾಖಲಾತಿಯನ್ನು ಪರಿಶೀಲನೆ ಮಾಡಿರುವುದಿಲ್ಲ, ನಾನು ಹಾಜರುಪಡಿಸಿರುವ ದಾಖಲಾತಿ ಯಲ್ಲಿ ಛಾಯಚಿತ್ರದಲ್ಲಿ ಮುಂಭಾಗದ ಫೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸಾಕ್ಷಿಯು ಫೋಟೋದಲ್ಲಿ ಕಾಣುತ್ತಿದೆ ಎಂದು ನುಡಿದಿರುತ್ತಾರೆ, ನಾವು ವಶಪಡಿಸಿಕೊಂಡಿರುವ ಮುದ್ದೆಮಾಲುಗಳ ಮೇಲೆ ನಾನಾಗಲೀ ಅಥವಾ ಪಂಚರಾಗಲೀ ಸಹಿ ಮಾಡಿರುವುದಿಲ್ಲ ಎಂದರೆ ಈಗ ಸದರಿ  ಚೀಟಿ ಕಾಣುತ್ತಿಲ್ಲ ಎಂದು ನುಡಿದಿರುತ್ತಾರೆ, ಮಹಜರನ್ನು ಯಾರು ಬರೆದಿರುತ್ತಾರೆ ಎಂದು ನನಗೆ ನೆನಪು ಇರುವುದಿಲ್ಲ ಎಂದು ನುಡಿದಿರುತ್ತಾರೆ.

10. ಈ ಪ್ರಕರಣದಲಿಡ್ಲ ತನಿಖಾಧಿಕಾರಿಯಾದ ಚಾಸಾ-25 ವೆಂಕಟರಮಣ ಇವರನ್ನು ಪ್ರಾಸಾ-8 ಎಂದು ವಿಚಾರಣೆ ಮಾಡಿಕೊಂಡು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ30.09.2020 ರಂದು ಚಾಸಾ-24 ರವರಿಂದ ಕಡತವನ್ನು ಪಡೆದುಕೊಂಡು ಅದೇದಿನ ಮಡಿಕೇರಿ ಸರ್ಕಾರಿ ಆಸ್ಪತ್ರೆಯಿಂದ ಅಪಘಾತದಲ್ಲಿ ಮೃತಪಟ್ಟ ನಿತೀನ್ ರವರ ಎಮ್ ಎಲ್

ಸಿಯನ್ನು ಪಡೆದುಕೊಂಡು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ 304(ಎ) ಐಪಿಸಿ ಕಲಂ ಅನ್ನು ಅಳವಡಿಸಿಕೊಳ್ಳುವಂತೆ ನ್ಯಾಯಾಲಯಕ್ಕೆ ವರದಿಯನ್ನು ನೀಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಚಾಸಾ26 ರವರಿಗೆ ವಹಿಸಿಕೊಟ್ಟಿರುತ್ತೇನೆ. ನಿವೇದನೆಯನ್ನು ನಿಪಿ-22, ಸಾಕ್ಷಿಯ ಸಹಿಯನ್ನು ನಿಪಿ 22(ಎ) ಎಂದು, ವರದಿಯನ್ನು ನಿಪಿ-23, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಿರುವುದಾಗಿಯೂ ನುಡಿದಿರುತ್ತಾರೆ. ಇವರನ್ನು ಪಾಟೀಸವಾಲಿಗೆ ಒಳಪಡಿಸಿದಾಗ ಆರೋಪಿ ಪರ ವಕೀಲರು ಸೂಚಿಸಿದ ಪ್ರಶ್ನೆಗಳಿಗೆ ಅಲ್ಲಗಳೆದಿರುತ್ತಾರೆ.

11. ಇನ್ನೋರ್ವ ತನಿಖಾಧಿಕಾರಿಯಾದ ಚಾಸಾ-26 ಮಹೇಶ್ ಎಂ ಇವರನ್ನು ಪ್ರಾಸಾ-9 ಎಂದು ವಿಚಾರಣೆ ಮಾಡಿಕೊಂಡು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸುತ್ತಾ ದಿಃ01.10.2020 ರಂದು ನಾನು ಸದರಿ ಕಡತವನ್ನು ಚಾಸಾ-25 ರವರಿಂದ ಸ್ವೀಕರಿಸಿರುತ್ತೇನೆ. ನಂತರ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿರುತ್ತೇನೆ. ನಂತರ ಮೃತ ನಿತೀನ್ ರವರ ಶವ ತನಿಕೆಯ ಬಗ್ಗೆ ಮಡಿಕೇರಿ ಸರ್ಕಾರಿ ಆಸ್ಪತ್ರೆಗೆ ತೆರಳಿ ಚಾಸಾ-10 ರಿಂದ ಚಾಸಾ-12 ರವರ ಸಮಕ್ಷಮ ಶವತನಿಖೆಯನ್ನು ನಡೆಸಿರುತ್ತೇನೆ. ಹಾಗೂ ಚಾಸಾ-10 ರಿಂದ ಚಾಸಾ-14 ರವರ ಹೇಳಿಕೆಗಳನ್ನು ದಾಖಲಿಕೊಂಡಿರುತ್ತೇನೆ. ಅದೇದಿನ ಚಾಸಾ-22 ರವರಿಂದ ಕೃತ್ಯ ನಡೆದ ಸ್ಥಳದಲ್ಲಿ ತೆಗೆದ ಭಾವಚಿತ್ರಗಳ ಬಗ್ಗೆ ಸಿಡಿ ಆಗಿ ಪರಿವರ್ತನೆ ಮಾಡಿಕೊಂಡು 65 ಬಿ ದೃಡೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 07.11.2020 ರಂದು ಕೆಎ-51-ಎಲ್-3054 ಚಾಲಕ ಸುರೇಶ್ ರವರಿಗೆ ಸಿಆರ್ ಪಿ ಸಿ 41 ರ ಪ್ರಕಾರ ನೋಟೀಸ್ ನೀಡಿ ಉತ್ತರ ಪಡೆದು ಕೊಂಡಿರುತ್ತೇನೆ. ಸದರಿ ವಾಹನದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಸುರೇಶ್ ಅವರಿಗೆ ಚಾಲನಾ ಪರವಾನಗಿ ಇರಲಿಲ್ಲ ಮತ್ತು ಸದರಿ ವಾಹನದ ಇನ್ಸೂರೆನ್ಸ್ ಅವಧಿ ಮುಕ್ತಾಯ ವಾಗಿರುತ್ತದೆ. ದಿನಾಂಕ 24.01.2021 ರಂದು ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ದೃಡೀಕರಣ ಪತ್ರ ನಿಪಿ-21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಶವ ತನಿಖಾ ಮಹಜರ್ ನಿಪಿ-24, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಐಎಂವಿ ವರದಿ ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ಪೋಸ್ಟ್ ಮಾಟಮ್ ರೀಪೊರ್ಟ್ ನಿಪಿ-26, ಸಾಕ್ಷಿಯ ಸಹಿಯುನ್ನು ನಿಪಿ-26(ಎ) ಎಂದು ಗುರುತಿಸಲಾಯಿತು ಮತ್ತು 133 ರ ನೋಟಿಸ್ ನಿಪಿ-27, ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಉತ್ತರ ನೋಟೀಸ್ ನಿಪಿ-28, ಸಾಕ್ಷಿಯ

ಸಹಿಯನ್ನು ನಿಪಿ-28(ಎ), ಸ್ವತ್ತು ಬಿಡುಗಡೆ ಮಹಜರ್ ನಿಪಿ-29, ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ನೋಟೀಸ್ ಜಾರಿ ಮಾಡಿರುವ ವರದಿ ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು. ಬಿ ರಿಜಿಸ್ಟರ್ ಎಸ್ಟ್ರಾಕ್ಟ್ ನಿಪಿ-31 ಎಂದು, ಸಾಕ್ಷಿಯ ಸಹಿಯನ್ನು ನಿಪಿ-31 (ಎ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ನಾನು ಅಪಘಾತ ಸ್ಥಳಕ್ಕೆ ಹೋದಾಗ ರಸ್ತೆಯಲ್ಲಿ ಯಾವುದೇ ಕುರುಹುಗಳು ಇರುವುದಿಲ್ಲ, ಅಪಘಾತ ಆದ 45 ನಿಮಿಷಗಳ ನಂತರ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ ಎಂದು ನುಡಿದು, ಆರೋಪಿ ಪರ ವಕೀಲರು ಸೂಚಿಸಿದ ಪ್ರಶ್ನೆಗಳಿಗೆ ಅಲ್ಲಗಳೆದಿರುತ್ತಾರೆ.

12. ಈ ಪ್ರಕರಣದ ಪಿರ್ಯಾದುದಾರರಾದ ಚಾಸಾ-1 ಶಿವಕುಮಾರ್ ಇವರನ್ನು ಪ್ರಾಸಾ-1 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-3 ರುಕ್ಮಿಣಿ ಇವರನ್ನು ಪ್ರಾಸಾ-2 ಎಂದು, ಇನ್ಪೋರ್ವ ಪ್ರತ್ಯಕ್ಷಸಾಕ್ಷಿದರರಾದ ಚಾಸಾ-4 ಮೈನಾ ಇವರನ್ನು ಪ್ರಾಸಾ-3 ಎಂದು, ಇನ್ಪೋರ್ವ ಪ್ರತ್ಯಕ್ಷಸಾಕ್ಷಿದರರಾದ ಚಾಸಾ-5 ಸಂಚಿತ್ ಇವರನ್ನು ಪ್ರಾಸಾ-4 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-5 ದಕ್ಷಿತ್ ಇವರನ್ನು ಪ್ರಾಸಾ-5 ಎಂದು ಮತ್ತು ಮಹಜರು ಸಾಕ್ಷಿದಾರ ರಾದ ಚಾಸಾ-8 ಪ್ರವೀಣ್.ಹೆಚ್.ಪಿ ಇವರನ್ನು ಪ್ರಾಸಾ-6 ಎಂದು ವಿಚಾರಣೆ ಮಾಡಿದ್ದು, ಇವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-1 ಮತ್ತು 2 ರಲ್ಲಿ ಏನು ಬರೆದಿದೆ ಎಂದು ತಮಗೆ ಗೊತ್ತಿರುವುದಿಲ್ಲ, ತಮ್ಮಗಳ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಲ್ಲ, ಪೊಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗಳಿಗೆ ಸಹಿ ಮಾಡಿರುವು ದಾಗಿಯೂ ಚಾಸಾ-4 ರವರ ವಾಹನಕ್ಕೂ ಆರೋಪಿಯ ವಾಹನಕ್ಕೂ ಯಾವುಕೇ ಅಪಘಾತ ಆಗಿಲ್ಲ, ಈ ಸಂಬಂಧ ದೂರು ನೀಡಿಲ್ಲ, ನಾವುಗಳು ಯಾವುದೇ ಅಪಘಾತ ನೋಡಿಲ್ಲ ಎಂದು ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆದಕಾರಣ ನಿಪಿ-1 ದೂರು ಮತ್ತು ನಿಪಿ-2 ಮಹಜರನ್ನು ಅಭಿಯೋಜನೆಯವರು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

13. ಈ ಪ್ರಕರಣದಲ್ಲಿ ಎಲ್ಲಾ ಸಾಕ್ಷಿದಾರರ ವಿಚಾರಣೆಯನ್ನು ಗಮನಿಸಿದಾಗ ಪ್ರತ್ಯಕ್ಷ ಸಾಕ್ಷಿಗಳು ಯಾರನ್ನು ತನಿಖಾಧಿಕಾರಿಗಳು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ, ಮತ್ತು ಸ್ಥಳ

ಮಹಜರ್ ಸಮಯದಲ್ಲಿ ಮಹಜರು ಸಾಕ್ಷಿದರರು ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ಪ್ರತಿಕೂಲ ಸಾಕ್ಷ್ಯ ನುಡಿದಿರುವ ಕಾರಣ ನಿಪಿ-2 ಮಹಜರನ್ನು ರುಜುವಾತುಪಡಿಸುವಲ್ಲಿ ವಿಫಲ ರಾಗಿರುತ್ತಾರೆ. ಮತ್ತು ದೂರುದಾರರು ಸಹ ಈ ಪ್ರಕರಣದಲ್ಲಿ ಅಭಿಯೋಜನೆಯವರ ಪರ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆದಕಾರಣ ನಿಪಿ-1 ಅನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಅಪಘಾತದಲ್ಲಿ ನಿತೀಶ್ ರವರು ಮೃತಪಟ್ಟ ಬಗ್ಗೆ ವಿಷಯ ತಿಳಿದು ಕೊಂಡಿರುವಂತಹ ಸಾಕ್ಷಿದಾರರು ಈ ಪ್ರಕರಣದಲ್ಲಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇವರು ನಿಪಿ-2 ನ್ನು ಆಧರಿಸಿ ಮಹಜರು ಕ್ರಮ, ಅಮಾನತ್ತು ಮಹಜರು ಕ್ರಮ ಜರುಗಿಸಿರುವ ಬಗ್ಗೆ ಸಾಕ್ಷಿಗಳ ಹೇಳಿಕೆ ಪಡೆದಿರುವ ಬಗ್ಗೆ ನುಡಿದಿರುತ್ತಾರೆ, ಆದರೆ ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಪಿರ್ಯಾದುದಾರರು ಮತ್ತು ಗಾಯಾಳು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆಂದು, ಇವರ ಸಾಕ್ಷ್ಯ ಅಷ್ಟೊಂದು ಮಹತ್ವ ಪಡೆದಿಲ್ಲ.

14. ಅಭಿಯೋಜನಾ ಪಕ್ಷದವರು ಹಾಜರುಪಡಿಸಿರುವ ನಿಪಿ-24 ಶವ ಪರೀಕ್ಷಾ ಮಹಜರು, ನಿಪಿ-25 ಐ.ಎಂ.ವಿ ವರದಿ, ನಿಪಿ-26 ಶವತನಿಖಾ ವರದಿ ಇವುಗಳ ಬಗ್ಗೆ ವಿವಾದ ಇರುವುದಿಲ್ಲ. ಆ ದಿನ 1 ನೇ ಆರೋಪಿಯು ಸದರಿ ವಾಹನವನ್ನು ನಿರ್ಲಕ್ಷ್ಯತೆಯಿಂದ ಚಲಾಯಿ ಸಿರುತ್ತಾರೆಂದು ಆರೋಪಿ ತಪ್ಪಿನಿಂದ ಸದರಿ ಅಪಘಾತ ಆಗಿರುತ್ತದೆಂದು, ಲಬ್ಯವಿರುವ ಸಂಪೂರ್ಣ ಮೌಖಿಕ ದಸ್ತಾವೇಜು ಸಾಕ್ಷ್ಯಗಳಿಂದ ಕಂಡುಬಂದಿರುವುದಿಲ್ಲ. ಆದಕಾರಣದಿಂದ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ)ರ ಆರೋಪವನ್ನು ಆರೋಪಿಯ ವಿರುದ್ಧ ಅಭಿಯೋಜನಾ ಪಕ್ಷದವರು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುವುದ ರಿಂದ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಸಂಶಯ ಮೂಡಿರುವುದರಿಂದ ಸದರಿ ಸಂಶಯದ ಲಾಭವನ್ನು 1 ನೇ ಆರೋಪಿಗೆ ನೀಡುವುದು ಉತ್ತಮ ಎಂದು ಕಂಡುಬಂದಿರುತ್ತದೆ. ಆದ ಕಾರಣದಿಂದ ನಾನು **ಅಂಶ ನಂ. 1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

15. **ಅಂಶ.3:-** ಅಭಿಯೋಜನೆಯವರು ಹಾಜರುಪಡಿಸಿರುವಂತಹ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ ತನಿಖಾಧಿಕಾರಿಗಳು 1 ನೇ ಆರೋಪಿಗೆ ಮೋಟಾರು ಸೈಕಲ್ ವಾಹನವನ್ನು ಚಲಾಯಿಸಲು ಚಾಲನಾ ಪತ್ರವನ್ನು ಹಾಜರುಪಡಿಸಲು ನೋಟಿಸು ನೀಡಿರು ತ್ತಾರೆ, ಆದರೆ 1 ನೇ ಆರೋಪಿಯು ಯಾವುದೇ ಪ್ರತ್ಯುತ್ತರ ನೋಟಿಸು ಹಾಗೂ ಚಾಲನ ಪತ್ರ ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುವುದಿಲ್ಲ. ಆದಕಾರಣ ಅಭಿಯೋಜನೆಯವರು

1 ನೇ ಆರೋಪಿಯ ಮೇಲೆ ಹೊರೆಸಲಾಗಿದ್ದ ಮೋಟಾರು ವಾಹನ ಕಾಯಿದೆ ಕಲಂ 181 ರಡಿ ಯಲ್ಲಿ ಆರೋಪವನ್ನು ರುಜುವಾತುಪಡಿಸಲು ಸಫಲರಾಗಿರುತ್ತಾರೆ. ಆದಕಾರಣ ಅಂಶ.3 ಅನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

16. **ಅಂಶ.4:-** ಅಂಶ ನಂ-1 ರಿಂದ 3 ರ ಮೇಲೆ ಮಾಡಿರುವ ವಿವರವಾದ ಚರ್ಚೆ ಮತ್ತು ಅದಕ್ಕೆ ನೀಡಿರುವ ಕಾರಣಗಳಿಗೆ ಅಂಶ.4 ಕ್ಕೆ ಈ ಕೆಳಗಿನಂತೆ ಆದೇಶ ಮಾಡುತ್ತೇನೆ.

**:ಆದೇಶ :**

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ 1 ನೇ ಆರೋಪಿಯ ಮೇಲೆ ಹೊರೆಸಲಾಗಿದ್ದ ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಆರೋಪದಿಂದ ದೋಷಮುಕ್ತಗೊಳಿಸಿ ನಿರ್ದೋಷಿ ಎಂದು ನಿರ್ಣಯಿಸಿ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಡಿಯಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ 1 ನೇ ಆರೋಪಿಯ ಮೇಲೆ ಹೊರಡಿಸಲಾದ ಮೋಟಾರು ವಾಹನ ಕಾಯಿದೆ ಕಲಂ 181 ರ ಪ್ರಕಾರ ದಿನಾಂಕ 30.09.2020 ರ ಪ್ರಕರಣ ದಾಖಲಾದ ದಿನಾಂಕದಂದು 1 ನೇ ಆರೋಪಿಗೆ ಚಾಲನಾ ಪತ್ರವಿಲ್ಲದ ಕಾರಣ 1 ನೇ ಆರೋಪಿಗೆ ರೂ.3,000/-ಗಳನ್ನು ದಂಡ ವಿಧಿಸಲಾಗಿದೆ, ತಪ್ಪಿದಲ್ಲಿ 15 ದಿನಗಳ ಕಾಲ ಸಾದಾ ಜೈಲುವಾಸ ಅನುಭವಿಸತಕ್ಕದ್ದು.

1 ನೇ ಆರೋಪಿ ಮತ್ತು ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡುಗಳು ಮತ್ತು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಮತ್ತು ಪೂರ ಕಡತವನ್ನು ಮತ್ತು ಮುದ್ದೆಮಾಲುಗಳನ್ನು ಸಿಸಿ ನಂ.617/2023 ರ ಪ್ರಕರಣವು ಇತ್ಯಾರ್ಥವಾಗುವವರೆಗೂ ಇಡತಕ್ಕದ್ದು.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲದಲ್ಲಿ ದಿನಾಂಕ 08 ನೇ ಜುಲೈ 2026 ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).

ಸಹಿ/-
**(ಶ್ರೀನಾಥ ಜೆ.ಎನ್ )**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ .ಎಫ್.ಸಿ., ಸೋಮವಾರಪೇಟೆ.

**::ಅನುಬಂಧ:**

**1. ಆಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :**

| | | |
|---|---|---|
| ಪ್ರಾಸಾ- 1 | : | ಶಿವಕುಮಾರ್ |
| ಪ್ರಾಸಾ- 2 | : | ರುಕ್ಮಿಣಿ |
| ಪ್ರಾಸಾ -3 | : | ಮೈನಾ |
| ಪ್ರಾಸಾ- 4 | : | ಸಂಚಿತ್ |
| ಪ್ರಾಸಾ- 5 | : | ದಕ್ಷಿತ್ |
| ಪ್ರಾಸಾ- 6 | : | ಪ್ರವೀಣ |
| ಪ್ರಾಸಾ- 7 | : | ರಮೇಶ.ಕೆ.ಒ |
| ಪ್ರಾಸಾ- 8 | : | ವೆಂಕಟರಮಣ |
| ಪ್ರಾಸಾ- 9 | : | ಮಹೇಶ.ಎಂ |

**2. ಅಭಿಯೋಜನಾ ಪರ ಹಾಜರುಪಡಿಸಿದ ದಾಖಲೆಗಳು:**

| | | |
|---|---|---|
| ನಿಶಾನೆ ಪಿ.1 | : | ದೂರು |
| ನಿಶಾನೆ ಪಿ.1(ಎ) | : | ಪ್ರಾಸಾ-1 ರವರ ಸಹಿ |
| ನಿಶಾನೆ ಪಿ.2 | : | ಅಪರಾಧ ವಿವರ ನಮೂನೆ |
| ನಿಶಾನೆ ಪಿ.2(ಎ) | : | ಪ್ರಾಸಾ-2 ರವರ ಸಹಿ |
| ನಿಶಾನೆ ಪಿ.2(ಬಿ) | : | ಪ್ರಾಸಾ-5 ರವರ ಸಹಿ |
| ನಿಶಾನೆ ಪಿ.2(ಸಿ) | : | ಪ್ರಾಸಾ-7 ರವರ ಸಹಿ |
| ನಿಶಾನೆ ಪಿ.3 | : | ಪ್ರಾಸಾ-1 ರವರ ಹೇಳಿಕೆ |
| ನಿಶಾನೆ ಪಿ.4 | : | ಪ್ರಾಸಾ-2 ರವರ ಹೇಳಿಕೆ |
| ನಿಶಾನೆ ಪಿ.5 | : | ಪ್ರಾಸಾ-3 ರವರ ಹೇಳಿಕೆ |
| ನಿಶಾನೆ ಪಿ.6 | : | ಪ್ರಾಸಾ-4 ರವರ ಹೇಳಿಕೆ |
| ನಿಶಾನೆ ಪಿ.7 | : | ಪ್ರಾಸಾ-5 ರವರ ಹೇಳಿಕೆ |
| ನಿಶಾನೆ ಪಿ.8 | : | ಪ್ರ.ವ.ವರದಿ |
| ನಿಶಾನೆ ಪಿ.9 ರಿಂದ 19 | : | ಫೋಟೋಗಳು |
| ನಿಶಾನೆ ಪಿ.20 | : | ಸಿಡಿ |
| ನಿಶಾನೆ ಪಿ.21 | : | ಕಲಂ 65(ಬಿ)ರ ದೃಡೀಕರಣ ಪತ್ರ |
| ನಿಶಾನೆ ಪಿ.22 | : | ನಿವೇದನೆ |
| ನಿಶಾನೆ ಪಿ.23 | : | ಗಾಯಗೊಂಡವರ ಬಗ್ಗೆ ವರದಿ ಮಾಡುವ ಬಗ್ಗೆ |

| | | |
|---|---|---|
| ನಿಶಾನೆ ಪಿ.24 | : | ಶವತನಿಖಾ ಮಹಜರು |
| ನಿಶಾನೆ ಪಿ.25 | : | ಐ.ಎಂ.ವಿ ವರದಿ |
| ನಿಶಾನೆ ಪಿ.26 | : | ಶವತನಿಖಾ ವರದಿ |
| ನಿಶಾನೆ ಪಿ.27 | : | 133 ರ ನೋಟಿಸು |
| ನಿಶಾನೆ ಪಿ.28 | : | 133 ರ ನೋಟಿಸಿಗೆ ಉತ್ತರ |
| ನಿಶಾನೆ ಪಿ.29 | : | ಸ್ವತ್ತು ಬಿಡುಗಡೆ ಮಹಜರು |
| ನಿಶಾನೆ ಪಿ.30 | : | ಅಬ್ದುಲ್ ರೆಹಮಾನ್ ರವರು ಬರೆದುಕೊಂಡ ವರದಿ |
| ನಿಶಾನೆ ಪಿ.31 | : | ಕೆಎ-51-ಎಲ್-3054 ರ ವಾಹನದ ಬಿ-ಎಕ್ಸ್ಟ್ರಾಕ್ಟ್ |

**3. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು: -ಇಲ್ಲ-**

**4. ಆರೋಪಿತರ ಪರ ಹಾಜರುಪಡಿಸಿದ ದಾಖಲೆಗಳು: -ಇಲ್ಲ-**

**5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೇಮಾಲುಗಳು:** -ಇಲ್ಲ-

| | | |
|---|---|---|
| ಮುದ್ದೆಮಾಲು-1 | : | ಓಮಿನಿ ಮಾರುತಿ ವ್ಯಾನಿನ ಇಂಡಿಕೇಟರ್ ಚೂರುಗಳು |
| ಮುದ್ದೆಮಾಲು-2 | : | ಮೋಟಾರು ಸೈಕಲಿನ ಬ್ರೇಕ್ ಲೈಟ್ ಚೂರುಗಳು |
| ಮುದ್ದೆಮಾಲು-3 | : | ಮೋಟಾರು ಸೈಕಲಿನ ತುಂಡಾಗಿರುವ ಡೂಮ್ ಲೈಟ್ |
| ಮುದ್ದೆಮಾಲು-4 | : | ಮೋಟಾರು ಸೈಕಲಿನ ನಂಬರ್ ಪ್ಲೇಟ್ ಸಮೇತ ಮಡ್ ಗಾರ್ಡ್ |

ಸಹಿ/-
**(ಶ್ರೀನಾಥ ಜೆ.ಎನ್ )**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ .ಎಫ್.ಸಿ., ಸೋಮವಾರಪೇಟೆ.

**:ಆದೇಶ :**

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ 1 ನೇ ಆರೋಪಿಯ

ಮೇಲೆ ಹೊರೆಸಲಾಗಿದ್ದ ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಆರೋಪದಿಂದ ದೋಷಮುಕ್ತಗೊಳಿಸಿ ನಿರ್ದೋಷಿ ಎಂದು ನಿರ್ಣಯಿಸಿ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಡಿಯಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ 1ನೇ ಆರೋಪಿಯ ಮೇಲೆ ಹೊರಡಿಸಲಾದ ಮೋಟಾರು ವಾಹನ ಕಾಯಿದೆ ಕಲಂ 181ರ ಪ್ರಕಾರ ದಿನಾಂಕ 30.09.2020ರ ಪ್ರಕರಣ ದಾಖಲಾದ ದಿನಾಂಕದಂದು 1ನೇ ಆರೋಪಿಗೆ ಚಾಲನಾ ಪತ್ರವಿಲ್ಲದ ಕಾರಣ ಆರೋಪಿಗೆ ರೂ.3,000/-ಗಳನ್ನು ವಿಧಿಸಲಾಗಿದೆ.

1ನೇ ಆರೋಪಿ ಮತ್ತು ಜಾಮೀನುದಾರರು ಬರೆದುಕೊಟ್ಟಿರುವ ಜಾಮೀ ನಿನ ಬಾಂಡುಗಳು ಮತ್ತು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಸಿ ಜೆ ಮತ್ತು ಜೆ ಎಮ್ ಎಫ್

ಸಿ

ಸೋಮವಾರಪೇಟೆ.